ಶ್ರೀ ಜೇಹರಾಜ್ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ರಾಥಮಿಕ ಶಿಕ್ಷಕರ ನೇಮಕಾತಿಯ ಬಗ್ಗೆ.

೨೭೬. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಪ್ರಾಥಮಿಕ ಶಿಕ್ಷಕರು ನೇಮಕಾತಿ ಮತ್ತು ವರ್ಗಾವರ್ಗಿ ಅಧಿಕಾರಗಳನ್ನು ಸರ್ಕಾರದವರು ಸಂಪೂರ್ಣವಾಗಿ ಜಿಲ್ಲಾ ಪರಿಷತ್‌ಗಳಿಗೆ ವರ್ಗಾಯಿಸಿದ್ದಾರೆಯೇ;

ಆ) ಜಿಲ್ಲಾ ವಿದ್ಯಾ ಇಲಾಖೆಯ ಉಪ ನಿರ್ದೇಶಕರ ಕಾರ್ಯ ವ್ಯಾಪ್ತಿ ಜಿಲ್ಲಾ ಪರಿಷತ್ ಅಧೀನದಲ್ಲಿದೆಯೆ ಅಥವಾ ಶಿಕ್ಷಣ ಇಲಾಖೆಯ ಅಧೀನದಲ್ಲಿದೆಯೇ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು).—

ಅ) ಆಡಳಿತಾತ್ಮಕ ಅಧಿಕಾರ ಜಿಲ್ಲಾ ಪರಿಷತ್‌ಗಳಿಗೆ ವಹಿಸಲಾಗಿದೆ. ಶೈಕ್ಷಣಿಕ ವಿಚಾರಣೆ ಮಾರ್ಗದರ್ಶನ ನೀತಿ ನಿರೂಪಣೆ ಶಾಲಾ ತಪಾಸಣೆ ಶಾಲೆಗಳಿಗೆ ಭೇಟಿ ಕೊಡುವುದು ಶಿಕ್ಷಣ ನೀತಿಯ ಅನುಷ್ಠಾನದ ಪರಿಶೀಲನೆ ಇವುಗಳ ಬಗ್ಗೆ ಶಿಕ್ಷಣ ಇಲಾಖೆಗೆ ಅಧಿಕಾರವಿದೆ.

ಆ) 'ಅ' ರಲ್ಲಿರುವ ಉತ್ತರಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುವರು.

ಘಟಪ್ರಭಾ ಯೋಜನೆಯಿಂದ ನಿರ್ಮಾಣಗೊಳ್ಳುತ್ತಿರುವ ಕುರಣಿ ಹಾಗೂ ಕೊಚರಿ ಯಾತ ನೀರಾವರಿ.

೨೪೧. ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಘಟಪ್ರಭಾ ಯೋಜನೆಯಿಂದ ನಿರ್ಮಾಗೊಳ್ಳುತ್ತಿರುವ ಕುರಣಿ ಹಾಗೂ ಕೊಚರಿ ಬಿಡುಗಾವಲೆಯಿಂದ ನೀರಾವರಿ ಆಗುವ ಜಮೀನಿನ ವಿಸ್ತೀರ್ಣವೆಷ್ಟು;

ಆ) ಸದರಿ ಕಾಲುವೆಯ ಕೆಲಸ ಪೂರ್ಣಗೊಳ್ಳುವುದಕ್ಕೆ ಎಷ್ಟು ಕಾಲಾವಧಿ ಬೇಕು;

ಇ) ಕೊಚರಿ ಹಾಗೂ ಕುರಣಿ ಯಾತ ನೀರಾವರಿಯನ್ನು ೩ ಹಂತಗಳಲ್ಲಿ ಪೂರ್ತಿ ಮಾಡಲಿಕ್ಕೆ ಸರ್ಕಾರಕ್ಕೆ ಕೈಗೊಂಡ ಕ್ರಮವೇನು;

ಈ) ಈ ಎಲ್ಲಾ ಕಾಲುವೆಗಳಿಂದ ಹುಕ್ಕೇರಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಜಮೀನು ನೀರಾವರಿ ಆಗುತ್ತದೆ ಹಾಗೂ ಇದಕ್ಕೆ ತಗಲುವ ಒಟ್ಟಾರೆ ಖರ್ಚು ಎಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ನೀರಾವರಿ ಆಗುತ್ತಿರುವ ಕ್ಷೇತ್ರ.

೧)	ಕುರಣಿ ಹರಿಯುವ ಕಾಲುವೆ	೩೪೪ ಹೆಕ್ಟೇರ್
೨)	ಕುರಣಿ ಏತ ನೀರಾವರಿ ಯೋಜನೆ ಮೊದಲ ಹಂತ	೪೩೦ ಹೆಕ್ಟೇರ್
೩)	ಕೊಚರಿ ಹರಿಯುವ ಕಾಲುವೆ	೪೦.೬೮ ಹೆಕ್ಟೇರ್

ಆ) ೧) ಕುರಣಿ ಏತ ನೀರಾವರಿ ಮೊದಲ ಹಂತ–ಮಾರ್ಚ್ ೧೯೮೮.
ಕುರಣಿ ಏತ ನೀರಾವರಿ ೨ ಮತ್ತು ೩ನೇ ಹಂತ–೧೯೯೩–೯೪

೨) ಕುರಣಿ ಹರಿಯುವ ಕಾಲುವೆ–ಕೆ.ವಿ ೭ ರಿಂದ ೧೪ರ ವರೆಗೆ ಕೆಲಸಗಳು ಸ್ಥಗಿಸಗೊಂಡಿದ್ದು ಭೂಸ್ವಾಧೀನ ಸಮಸ್ಯೆಗಳು ಪರಿಹಾರವಾದ ನಂತರ ಪ್ರಾರಂಭಿತ ಲಾಗುವುದು.